# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮೆ: ಮಿಮಿಸಿಸ್ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗದಗ ತಾಲ್ಲೂಕಿನ ಎಲವಟ್ಟಿ ಮತ್ತಿತರೆ ಗ್ರಾಮಗಳಲ್ಲಿ ವರ್ಗಾವಣೆಯಾಗಿರುವ 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 12 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಿ ಯೋಜನೆಗೆ ಕಾಲಾವಕಾಶ ವಿಸ್ತರಿಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 204 ಎನ್‌ಸಿಇ 2008 ದಿನಾಂಕ: 12.6.2009.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 227 ಎನ್‌ಸಿಇ 2014 ದಿನಾಂಕ: 05.12.2014
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಕಡತ ಸಂಖ್ಯೆ: 1181.

* * *

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಮೆ: ಎಸ್.ಬಿ.ಓದನವರ್ ಅಂಡ್ ಬ್ರದರ್ಸ್ ಕಂಪನಿಗೆ ಗದಗ ಜಿಲ್ಲೆಯ, ಗದಗ್ ತಾಲ್ಲೂಕಿನ, ಎಲವಟ್ಟಿ, ಮಾಗಡಿ, ಎತ್ತಿನಹಳ್ಳಿ, ಹೀರೆಗುಂಜಾಲ್, ಚಿಕ್ಕೆಗುಂಜಾಲ್ ಗ್ರಾಮಗಳಲ್ಲಿ 5 ಮೆ.ವ್ಯಾ. ಮತ್ತು ನರೆಗಲ್ ಮತ್ತು ಕೊಟುಮಚ್ಚಗಿ ಗ್ರಾಮಗಳಲ್ಲಿ 5 ಮೆ.ವ್ಯಾ ಅನ್ನು ಒಟ್ಟು 10 .ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರಿ ಆದೇಶದಲ್ಲಿ ಮೆ: ಎಸ್.ಬಿ.ಓದನವರ್ ಅಂಡ್ ಬ್ರದರ್ಸ್ ಕಂಪನಿಗೆ, ಗದಗ ಜಿಲ್ಲೆಯ, ಗದಗ್ ತಾಲ್ಲೂಕಿನ, ಎಲವಟ್ಟಿ, ಮಾಗಡಿ, ಎತ್ತಿನಹಳ್ಳಿ, ಹೀರೆಗುಂಜಾಲ್, ಚಿಕ್ಕೆಗುಂಜಾಲ್ ಗ್ರಾಮಗಳಲ್ಲಿ ಹಂಚಿಕೆಯಾಗಿದ್ದ 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ: ಮಿಮಿಸಿಸ್ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ವರ್ಗಾಯಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಇವರು ಎಕ ಕಡತ ಪದ್ಧತಿಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಮೆ: ಮಿಮಿಸಿಸ್ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗದಗ ಜಿಲ್ಲೆಯ ಗದಗ ತಾಲ್ಲೂಕಿನ ಎಲವಟ್ಟಿ, ಮಾಗಡಿ, ಎತ್ತಿನಹಳ್ಳಿ, ಹೀರೆಗುಂಜಾಲ್, ಚಿಕ್ಕೆಗುಂಜಾಲ್ ಗ್ರಾಮಗಳಲ್ಲಿ ವರ್ಗಾವಣೆಯಾಗಿರುವ 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 12 ಮೆವ್ಯಾ ಸಾಮರ್ಥ್ಯಕ್ಕೆ ವೃದ್ಧಿಸುವಂತೆ ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸಲು 2 ವರ್ಷಗಳ ಕಾಲಾವಕಾಶ ನೀಡುವಂತೆ ಕೋರಿ, ಅಭಿವೃದ್ಧಿದಾರರು 2 ವರ್ಷಗಳಿಗೆ ಕಾಲಾವಕಾಶ ಶುಲ್ಕ ಸಂದಾಯ ಮಾಡಿರುತ್ತಾರೆ ಹಾಗೂ ಹೆಚ್ಚಳಗೊಳ್ಳಲಿರುವ ಸಾಮರ್ಥ್ಯವನ್ನು ಈಗಾಗಲೇ ಹಂಚಿಕೆಯಾಗಿರುವ 5 ಮೆ.ವ್ಯಾ. ಸಾಮರ್ಥ್ಯದ ಯೋಜನಾ ಸ್ಥಳದಲ್ಲೇ ಅನುಷ್ಠಾನಗೊಳಿಸುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ಸದರಿ ಪ್ರಸ್ತಾವನೆಯನ್ನು ಪರಿಗಣಿಸಿಬಹುದೆಂದು ಶಿಫಾರಸ್ಸು ಮಾಡುತ್ತಾ, ಯೋಜನೆಗೆ ಸಂಬಂಧಿಸಿದ ಡಿ.ಪಿ.ಆರ್ ಹಾಗೂ ಇತರೆ ದಾಖಲೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 166 ಎನ್‌ಸಿಇ 2015,**
**ಬೆಂಗಳೂರು, ದಿನಾಂಕ: 25.07.2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಮೆ: ಮಿಮಿಸಿಸ್ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗದಗ ಜಿಲ್ಲೆಯ ಗದಗ ತಾಲ್ಲೂಕಿನ ಎಲವಟ್ಟಿ, ಮಾಗಡಿ, ಎತ್ತಿನಹಳ್ಳಿ, ಹೀರೆಗುಂಜಾಲ್, ಚಿಕ್ಕೆಗುಂಜಾಲ್ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು ಈ ಕೆಳಕಂಡ ಶೆಡ್ಯೂಲ್‌ನಂತೆ 12 ಮೆ.ವ್ಯಾಗೆ ಹೆಚ್ಚಿಸಿ, ಹೆಚ್ಚಳಗೊಂಡ ಸಾಮರ್ಥ್ಯವನ್ನು ಈಗಾಗಲೇ ಹಂಚಿಕೆಯಾಗಿರುವ 5 ಮೆ.ವ್ಯಾ. ಸಾಮರ್ಥ್ಯದ ಜಾಗದಲ್ಲಿಯೇ ಅನುಷ್ಠಾನಗೊಳಿಸುವ ಷರತ್ತು ವಿಧಿಸಿ, ಯೋಜನೆಯ ಅನುಷ್ಠನಕ್ಕೆ ದಿನಾಂಕ : 10.6.2017 ರವರೆಗೆ ಕಾಲಾವಕಾಶ ನೀಡಿ ಆದೇಶಿಸಿದೆ.

Copy Attested under RTI

---2)

Asst. Public Information Officer
KREDL